ಹೆಡ್‌ಮಾಸ್ಟರರ ಮನೆಯಲ್ಲೇ ಉಳಿದಿದ್ದರು. ನಿಧಾನವಾಗಿ ಅವನ್ನೆಲ್ಲ ನೆನಪಿಗೆ ತಂದುಕೊಳ್ಳುತ್ತಾ ಗದ್ದೆಹಾದಿಯಲ್ಲಿ ವಾಪಸು ತಮ್ಮ ಮನೆಯ ದಿಕ್ಕಿಗೆ ಸೈಕಲ್ ತಿರುಗಿಸಿದರು.

ಇದೀಗ ರಾತ್ರಿ ಹತ್ತುಗಂಟೆಯೇ ಆಗಿರಬೇಕು. ಮಾವಿನಮರಗಳ ಪಕ್ಕದ ಒಂದು ಕಲ್ಲುಬಂಡೆಯ ಪಕ್ಕ ಸೈಕಲ್ ನಿಲ್ಲಿಸಿದರು. ಸ್ವಲ್ಪ ಹೊತ್ತು ಓಡಾಡಿದರು. ಆ ಬಂಡೆಯ ಮೇಲೆ ಕೂತರು. ಧ್ಯಾನಕ್ಕೆಂಬಂತೆ ಕಣ್ಣು ಮುಚ್ಚಿದರು. ಕೇಳಿದರು:

"ಊರದೇವಿ, ಯಾಕೆ ನೀವು ನನ್ನನ್ನು ಬಾ ಎಂದು ಮತ್ತೆ ಮತ್ತೆ ಕರೆದದ್ದು?"

"ಬಾ ಎನ್ನಲು ಮಾಸ್ತರೇ, ನೀವು ನನ್ನ ಪಾಲಿಗೆ ಯಾವತ್ತೂ ದೂರ ಹೋದವರೇ ಅಲ್ಲ. ಏನೋ ಮಮತೆ, ಏನೋ ಬಂಧನ, ಇದು ಪ್ರಕೃತಿಯ ಸ್ವಭಾವ."

"ಅದು ನನಗೆ ಅರ್ಥವಾಗುತ್ತದೆ. ಆದರೆ ಕಳಚಿದ ವೇಷವನ್ನು ಮತ್ತೆ ತೊಡುವುದು ಕಷ್ಟ. ಮತ್ತೆ ಅಂದಿನ ದಿನಗಳನ್ನು ಸೃಷ್ಟಿಸುವುದು ಕಷ್ಟ.''

"ಅದು ನನಗೆ ಗೊತ್ತು."

"ಮುಗಿದ ಪ್ರಸಂಗಗಳನ್ನು ಮುಗಿದಿವೆ ಎಂದೇ ತಿಳಿಯಬೇಕು. ಅದನ್ನು ಮತ್ತೆ ಸೃಷ್ಟಿಸಲಾಗುವುದಿಲ್ಲ. ಮರುಸೃಷ್ಟಿ ಮೊದಲ ಸೃಷ್ಟಿಯಂತೆ ಇರುವುದೂ ಇಲ್ಲ."

"ಈ ಮಾವಿನ ಹಣ್ಣುಗಳ ರುಚಿ ಅನೇಕ ವರ್ಷಗಳಿಂದ ಒಂದೇ ಥರ ಇದೆ. ಬದಲಾಗದೇ ಇರುವ ಸಂಗತಿಗಳೂ ಇವೆ."

"ಒಪ್ಪಿದೆ. ಮನುಷ್ಯ ಜೀವನ ಮಾವಿನಹಣ್ಣಿನಂತಲ್ಲವಲ್ಲ! ಅವನು ಸಿಹಿನೆನಪುಗಳನ್ನು ಬಿಟ್ಟು ಹೋಗಬಹುದು ಅಷ್ಟೆ. ಈ ಸೈಕಲ್‌ನಷ್ಟು ಕೂಡ ಅವನು ಶಾಶ್ವತ ಅಲ್ಲ."

ಊರದೇವಿ ಸುಮ್ಮನಾದಳು. ಆದರೂ ಅದೆಷ್ಟೋ ಹೊತ್ತು ಮಾಸ್ತರು ಅಲ್ಲೇ ಕೂತಿದ್ದರು. ಏನೋ ನೆನಪಾದಂತೆ ಗಡಬಡಿಸಿ ಎದ್ದು ಸೈಕಲ್ಲನ್ನು ಮತ್ತೆ ಅದಿದ್ದ ಜಾಗಕ್ಕೇ ಒಯ್ದು ನಿಲ್ಲಿಸಿದರು. ಊರದೇವಿ ನೋಡುತ್ತಿದ್ದಂತೆ, ಇನ್ನೂ ಮಾತುಗಳಿವೆ ಅಂದುಕೊಳ್ಳುತ್ತಿದ್ದಂತೆ ಹಿಂದೆ ನೋಡದೆ ಮಾಸ್ತರು ಮುಂದೆ ಮುಂದೆ ನಡೆದರು. ನಡೆದು ನಡೆದು ದೂ...ರದಲ್ಲಿ ಕಾಣದಾದರು.

---

## ಚಿಂತಾಮಣಿ ಕೊಡ್ಲೆಕೆರೆ

ಕವಿ, ಕತೆಗಾರ, ಪ್ರಬಂಧಕಾರ ಹಾಗೂ ವಿಮರ್ಶಕ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರು. ಈವರೆಗೆ ಆರು ಕವಿತೆಗಳ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಬಭ್ರುವಾಹನ ಎಂಬ ಇರುವೆ', 'ಮಾಯಾವಿ ಮಾಂಗಿ' ಅವರ ಕಥಾಸಂಗ್ರಹಗಳು. 'ಸಿಂಡ್ರೆಲಾ ಅಂಬ್ರೆಲಾ' ಅವರ ಮಕ್ಕಳ ಕವಿತೆಗಳ ಗುಚ್ಛ. 'ಅಂತರಂಗದ ಆಕಾಶ' ಅವರ ಸಂಶೋಧನಾ ಪ್ರಬಂಧವಾಗಿದ್ದು, 'ಮೊದಲ ಮನೆಯ ಮೆಟ್ಟಿಲು', 'ಟಪಾಲು ಬಸ್ಸು' ಪ್ರಬಂಧ ಸಂಗ್ರಹಗಳಾಗಿವೆ. ಬಿಎಸ್‌ಎನ್‌ಎಲ್‌ನ ಉದ್ಯೋಗಿ.